

International Journal of Kannada Research
www.kannadajournal.com

**ISSN: 2454–5813**
IJKR 2017; 3(3): 41-42
© 2017 IJKR
www.kannadajournal.com
Received: 12-05-2017
Accepted: 16-06-2017

**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಬಿ.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಳಿಯಾರು, ತುಮಕೂರು ಜಿಲ್ಲೆ

**Correspondence**
**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಬಿ.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಳಿಯಾರು, ತುಮಕೂರು ಜಿಲ್ಲೆ

# ರಾಮಧಾನ್ಯ ಚರಿತೆ–ಅವಲೋಕನ

**ಡಾ.ಬಾಳಪ್ಪ.ಎ.ಬಿ.**

**ಸಂಕ್ಷೇಪ್ತ ಸೂಚಿ**
ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದರೆ ಜನಮುಖಿ ಸಾಹಿತ್ಯವಾಗಿ ಪ್ರಮುಖ ಸಾಹಿತ್ಯ ಘಟ್ಟಗಳಲ್ಲಿ ಮೊದಲನೆಯದು ವಚನ ಸಾಹಿತ್ಯವಾದರೆ ಅದರ ಪ್ರತಿಬಿಂಬ ಪ್ರತಿಫಲನ ಎಂಬಂತೆ ರೂಪುಗೊಂಡ ಸಾಹಿತ್ಯವೆ ದಾಸಸಾಹಿತ್ಯ.ವಚನ ಸಾಹಿತ್ಯ ಹುಟ್ಟಿಕೊಂಡದ್ದು ಒಂದು ಸಾಮಾಜಿಕ ಉತ್ಕ್ರಾಂತಿಯ ಫಲಿತವಾಗಿ. ದಾಸಸಾಹಿತ್ಯವು ಜನಸಾಮಾನ್ಯರ ಮಧ್ಯದಿಂದಲೇ ಹುಟ್ಟಿದ ಆಶುಕಾವ್ಯ. ಧಾರ್ಮಿಕ ಪ್ರಭಾವಳಿಯೊಂದಿಗೆ ಎರಡು ಸಾಹಿತ್ಯ ಚಳುವಳಿಗಳು ಪ್ರೇರಣೆ ಪಡೆದಿದ್ದರೂ ಆಧ್ಯಾತ್ಮಿಕ ಬದುಕನ್ನು ಹಸನುಗೊಳಿಸಲು ಇಹದ ಬದುಕನ್ನು ಸ್ವಚ್ಚವಾಗಿಡಬೇಕೆಂಬ ಹಂಬಲದಿಂದ ರೂಪಧಾರಣೆ ಮಾಡಿದವುಗಳೇ ಆಗಿರುವುದು ಈ ಎರಡೂ ಸಾಹಿತ್ಯ ಪರಂಪರೆಗಳ ವೈಶಿಷ್ಟ್ಯವಾಗಿದೆ.
ವಚನಸಾಹಿತ್ಯವು ಆತ್ಮವಿಮರ್ಶೆಯ ಮೂಲಕ ಸಾಮಾಜಿಕ ವಿಮರ್ಶೆಗೆ ತೊಡಗಿದರೆ ಆತ್ಮವಿಕಾಸದ ಹಾದಿ ಸುಗಮವೆಂದರಿತದ್ದು ಇದರ ಮೂಲಾಶಯ. ಶಿವತ್ವ ಸಂಪಾದನೆಗೆ ಮಾನವತ್ವದ ಪರಿಶುದ್ದತೆ ಅಗತ್ಯವೆಂಬ ಅರಿವು ಮೂಡಿಸಿ ಅರಿತು ಶರಣರಾಗುವುದು ವಚನಕಾರರ ಮೂಲ ಉದ್ದೇಶವಾಗಿದೆ. ಅಂತೆಯೇ ದಾಸಸಾಹಿತ್ಯವೂ ಕೂಡ ಸಾಮಾಜಿಕ ವಿಮರ್ಶೆಯ ಮೂಲಕ ಆತ್ಮವಿಮರ್ಶೆಯನ್ನು ಒಂದುಗೂಡಿಸುತ್ತ ಸಮಾಜದ ಒಳಿತಿಗೆ 'ಹರಿಸರ್ವೋತ್ತಮ' ಪರಿಕಲ್ಪನೆ ಜಾರಿಗೆ ತಂದು ಸಾಮಾಜಿಕಸ್ವಾಸ್ಥ್ಯವನ್ನು ತರಬಹುದು ಎಂದು ನಂಬಿದ್ದರು. ಅಂತರಂಗದ ಶುದ್ಧಿಯೆ ಪ್ರಧಾನವಾದ ವಚನಸಾಹಿತ್ಯವು ಬಹಿರಂಗ ಶುದ್ಧಿಯನ್ನು ಹಿಮ್ಮೆಟ್ಟಿಸುತ್ತದೆ. ಅಂತರಂಗದ ಶುದ್ದಿಯ ಮೂಲಕ ಮನವ ತೊಳೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು 'ದಾಸಸಾಹಿತ್ಯದ ದಳವಾಯಿ' ಎನಿಸಿಕೊಂಡೆ ಪ್ರಸಿದ್ಧರಾದವರು ಕನಕದಾಸರು.

**ಪೀಠಿಕೆ**

ಮಧ್ಯಕಾಲೀನ ಕನ್ನಡಸಾಹಿತ್ಯ ಚರಿತ್ರೆಯಲ್ಲಿ ರಾಮನ ಕತೆಯ ಪ್ರಸಾರಕ್ಕಾಗಿ ಲಕ್ಷ್ಮೀಶನ ಜೈಮಿನಿ ಭಾರತದಿಂಧ ಆರಂಭವಾಗಿ ಆಧುನಿಕ ಸಾಹಿತ್ಯದ ಮುಂಗೋಳಿ ಎನಿಸಿದ ಮುದ್ದಣನವರೆಗೆ ರಾಮಕತೆಯ ಪ್ರವಾಹವು ನಿರಂತರವಾಗಿಯಲ್ಲದಿದ್ದರೂ ಹರಿದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅದೇ ಅವಧಿಯಲ್ಲಿ ಭಕ್ತಿ ಪಂಥದ ಕಾವು ಸಾಮಾಜಿಕ ಮತ್ತು ಧಾರ್ಮಿಕ ನೆಲೆಯಲ್ಲಿ ಭಿನ್ನ ವಿಚಾರಗಳ ಅನುಸಂಧಾನದಲ್ಲಿ ನಿರತವಾಗಿದ್ದುದು ಅರಿವಿಗೆ ಬರುತ್ತದೆ. ಸಾಹಿತ್ಯವನ್ನು ಸಮಾಜಮುಖಿಯಾಗಿಸುವ ಹಿನ್ನೆಲೆಯಲ್ಲಿ ಪಂಡಿತ ಮಂಡಳಿಯಿಂದ ದೂರ ಉಳಿದ ಪಾಮರರ ಬದುಕನ್ನು ಅಕ್ಷರ ಜಗತ್ತಿಗೆ ಪರಿಚಯಿಸುವ ಕಾರ್ಯಕ್ಕೆ ಅಣಿಗೊಳಿಸಿದವರು ವಚನಕಾರರು. ಆ ನಂತರ ಅವರ ವಾರಸುದಾರರಂತೆ ಮುಂದುವರಿದವರು ಕೀರ್ತನಾಕಾರರು. ಇಲ್ಲಿ ಕಂಡುಬರುವ ವಚನಕಾರರಾಗಲಿ ಕೀರ್ತನಾಕಾರರಾಗಲಿ ಭಕ್ತಿಮಾರ್ಗವು ಇಹದ ಬದುಕನ್ನು ಹಸನುಗೊಳಿಸುವುದಕ್ಕೆ ಇರುವ ಪ್ರಮುಖ ಸಾಧನ ಎಂದು ಮನಗಂಡಿದ್ದರು.ಅಲ್ಲದೆ ಸಮಾಜ ಪರಿವರ್ತನಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಕನಕದಾಸರು ಓರ್ವ ಕನ್ನಡದ ಶ್ರೇಷ್ಠ ಸಂತಕವಿ. ದಾಸಕೂಟದ ದಳವಾಯಿ. ಕವಿ ಹಾಗೂ ಕಲಿಯೆನಿಸಿದ ಸವ್ಯಸಾಚಿ. ಸಾಮಾಜಿಕ ಅಸಮಾನತೆ ಮತ್ತು ತರತಮಗಳ ವಿರುದ್ದ ಗಟ್ಟಿಧನಿಯೆತ್ತಿದ ಕೀರ್ತನಾಕಾರರು. ಕನಕರು ಪುರಂದರದಾಸರ ಸಮತೂಕದ ಸ್ವತಂತ್ರ ಕಾಂತಿಯುಳ್ಳ ಸಮಕಾಲೀನರು. ಕನಕದಾಸರು ದಾಸಕೂಟದ ಕೀರ್ತನಾಕಾರರಾಗಿರುವಂತೆಯೇ ಕವಿಗಳೂ ಹೌದು. ಇವರು ರಚಿಸಿದ ಕೃತಿಗಳೆಂದರೆ 42 ಸಂಧಿಗಳ 2800 ಸಾಂಗತ್ಯಗಳನ್ನೊಳಗೊಂಡ 'ಮೋಹನ ತರಂಗಿಣಿ', 158 ಭಾಮಿನಿ ಷಟ್ಪದಿಗಳ 'ರಾಮಧಾನ್ಯ ಚರಿತೆ',

9ಸಂಧಿಗಳ 481 ಭಾಮಿನಿ ಷಟ್ಪದಿಗಳ 'ನಳಚರಿತೆ' ಹರಿಭಕ್ತಿಸಾರ, ನೃಸಿಂಹ ಸ್ತವ ಪ್ರಮುಖವಾದವು. ಇವೆಲ್ಲವೂ ವಿಶಿಷ್ಟ ಕೊಡುಗೆಗಳು ಕನ್ನಡ ಸಾರಸ್ವತ ಲೋಕಕ್ಕೆ ಕನಕದಾಸರಿಂದ. ಮಾತ್ರವಲ್ಲದೆ ಕನಕದಾಸರು ಕೀರ್ತನೆಗಳ ಜೊತೆಗೆ ತಾತ್ವಿಕ ಸಂಗತಿಗಳನ್ನು ಸಾಂಕೇತಿಕ ರೂಪದಲ್ಲಿ ಅಭಿವ್ಯಕ್ತ ಪಡಿಸುವ ಮುಂಡಿಗೆಗಳನ್ನೂ ರಚಿಸಿದ್ದಾರೆ.

ಭಾರತೀಯ ಸನಾತನ ಪರಂಪರೆಯಲ್ಲಿ ವರ್ಣ–ವರ್ಗ ಸಂಘರ್ಷವು ಇಂದು ನಿನ್ನೆಯದಲ್ಲ. ಇದರ ಅಸ್ತಿತ್ವವನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಅನೇಕ ಕಡೆಗಳಲ್ಲಿ ಉಲ್ಲೇಖಿತವಾಗಿದೆ. ಕನಕದಾಸರು ರಚಿಸಿರುವ ರಾಮಧಾನ್ಯ ಚರಿತೆಯಲ್ಲಿಯೂ ಕನಕದಾಸರು ತಮ್ಮ ಜೀವಮಾನದಲ್ಲಿ ಕಂಡುಂಡ ಕಹಿ ಅನುಭವಗಳನ್ನು ಈ ಕೃತಿಯಲ್ಲಿ ದಾಖಲು ಮಾಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಪ್ರಾಣಿ ಪಕ್ಷಿಗಳನ್ನು ಜೀವಂತ ಪಾತ್ರಗಳೆನ್ನುವಂತೆ ಮನುಷ್ಯನ ಮನಸ್ಸಿನ ಸೂಕ್ಷ್ಮ ಸ್ತರಗಳನ್ನು ಪರಿಚಯಿಸುವ ದುರ್ಗಸಿಂಹನ ಕರ್ನಾಟಕ ಪಂಚತಂತ್ರದಲ್ಲಿ ಮೊದಲಬಾರಿಗೆ ನಾವು ಕಾಣಬಹುದು. ಅದಾದ ನಂತರ ಪ್ರಪಂಚದ ಸಾಹಿತ್ಯದಲ್ಲಿಯೇ ಮೊದಲಿನದು ಎನ್ನಲಾದ ರಾಮಧಾನ್ಯ ಚರಿತೆಯಲ್ಲಿ ತಾವು ಊಟ ಮಾಡುವ ಧಾನ್ಯಗಳನ್ನು ಪಾತ್ರವಾಗಿಸಿ ಜೀವತುಂಬಿ ಸಮಾಜದ ಅಸಮಾನತೆಯ ಚಿತ್ರಣ ನೀಡಿದವರು ಕನಕದಾಸರು.ಧಾನ್ಯಗಳನ್ನು ಮೂರ್ತೀಕರಿಸಿ ರೂಪಕಾತ್ಮಕವಾಗಿ ಚಿತ್ರಿಸಿರುವ ಕಥನತಂತ್ರ ಸೋಜಿಗವೆಸುತ್ತದೆ.

ರಾಮಧಾನ್ಯ ಚರಿತೆಯು ಅಪರೂಪದ ಸ್ವಕಲ್ಪಿತ ಸ್ವತಂತ್ರ ಕೃತಿ. ಇದನ್ನು ಮಹಾಕಾವ್ಯ ಎನ್ನುವುದಕ್ಕಿಂತ ಸಾಮಾಜಿಕ ವಿಡಂಬನಾ ಕಾವ್ಯ ಎನ್ನುವುದ ಸೂಕ್ತ. ಅತಿ ಚಿಕ್ಕದಾದ ಆದರೆ ಸುಂದರವಾದ ಕಥಾನಕದ ಖಂಡಕಾವ್ಯವೆಂದರೂ ನಡೆದೀತು. ಕೃತಿಯ ಹಿನ್ನೆಲೆಯನ್ನು ಗಮನಿಸಿದರೆ ಪಾಂಡವರು ಕಾಮ್ಯಕ ವನದಲ್ಲಿದ್ದಾಗ ವನವಾಸದ ಬೇಸರವನ್ನು ಕಡಿಮೆ ಮಾಡಲು ಶಾಂಡಿಲ್ಯ ಮುನಿಯು ಪಾಂಡವರಿಗೆ ರಾಗಿ ಮತ್ತು ಭತ್ತದ ಕತೆಯನ್ನು ಹೇಳುವರು. ಈ ಕಥಾಹಂದರವು ಮೂಲ ರಾಮಾಯಣದಲ್ಲಿ ಇಲ್ಲದಿರುವುದು ಇದರ ವೈಶಿಷ್ಟ್ಯವಾಗಿದೆ.

ರಾಮಧಾನ್ಯ ಚರಿತೆಯಲ್ಲಿ ಎರಡು ಕಥಾ ನೆಲೆಗಳಿವೆ. ರಾಮನ ವೈಭವದ ಕತೆ ಒಂದಾದರೆ, ಮತ್ತೊಂದು ಭತ್ತಕ್ಕಿಂತ ರಾಗಿಯೇ ಶ್ರೇಷ್ಠವೆಂಬುದನ್ನು ಒಳಗೊಂಡ ರೂಪಕಾತ್ಮಕ ಕತೆ. ಧರ್ಮ ಮತ್ತು ಪುರಾಣದ ಹಿನ್ನೆಲೆಯುಳ್ಳ ರಾಮನ ಕತೆಯನ್ನು ಸಾಮಾಜಿಕ ಕಳಕಳಿ ವಸ್ತುಗಳ ಸಂಗಮವಾಗಿ ತೋರಿಸುವ ಈ ಕೃತಿಯು ಕನಕದಾಸರ ಕಾರಯಿತ್ರೀ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ. ಕಡು ಜಡ ವೈದಿಕ ಮತ್ತು ನೆಲಮೂಲ ಸಂಸ್ಕೃತಿಯ ಸಂಘರ್ಷ ಪ್ರಧಾನವಾದುದು.ಇಡೀ ರಾಮಾಯಣ ಕತೆಯನ್ನು ಸಿಂಹಾವಲೋಕನ ಕ್ರಮದಿಂದ ನೋಡಲಾಗಿದೆ. ಕೆಳಸ್ತರದಿಂದ ಬಂದ ಕನಕದಾಸರಿಗೆ ತಮ್ಮ ಒಳಗುದಿಯನ್ನು ಹರಿಬಿಡಲು ಸಾಧ್ಯವಾಗುವಂಥ ಕೃತಿ ನಿರ್ಮಾಣದ ಜರೂರು ಇತ್ತೆನ್ನುವ ಸಾಧ್ಯತೆ ಹೆಚ್ಚೆಂದು ತೋರುತ್ತದೆ. ತಿನ್ನುವ ಅನ್ನದಲ್ಲಿ ಯಾವುದು ಶ್ರೇಷ್ಠ, ಯಾವುದು ಕನಿಷ್ಠ ಎನ್ನುವುದಕ್ಕಿಂತ ಮಾನವನ ಹಸಿವು ಮತ್ತು ಅವನ ಸಂಕಟಗಳಿಗೆ ಒದಗುವವನೇ ಶ್ರೇಷ್ಠವೆಂಬ ಸರಳ ಸತ್ಯ ಮತ್ತು ತತ್ವ ಪ್ರತಿಪಾದನೆ ಅನನ್ಯವೆನ್ನುವಂತೆ ಅಭಿವ್ಯಕ್ತವಾಗಿದೆ.

ಶ್ರೀರಾಮನು ರಾಗಿ ಮತ್ತು ಭತ್ತಗಳ ವಾಗ್ವಾದವನ್ನು ಪರಿಹರಿಸಿ ರಾಗಿ ಶ್ರೇಷ್ಠವೆಂದು ತೀರ್ಮಾನಿಸಿ ಅದಕ್ಕೆ ತನ್ನ ಹೆಸರಾದ 'ರಾಘವ' ಎಂದು ನಾಮಕರಣ ಮಾಡುತ್ತಾನೆ. ಇಲ್ಲಿ ಕನಕದಾಸರು ಶ್ರೀಹರಿಯ ಭಕ್ತರಾಗಿದ್ದರೂ ಅಂತರಂಗದಲ್ಲಿ ಓರ್ವ ಬಂಡಾಯಗಾರನಾಗಿ ಮನಸ್ಸು ಕೆಲಸ ಮಾಡಿರುವುದು ಅರಿವಿಗೆ ಬರುತ್ತದೆ. ಈ ಕತೆಯು ಕನಕದಾಸರ ಸೃಜನಾತ್ಮಕ ಶೋಧನೆಯ, ಆಳವಾದ ಸಾಮಾಜಿಕ ಕಾಳಜಿ ಮತ್ತು ಧೈರ್ಯದ ಪ್ರಯೋಗಶೀಲತೆಗೆ ಸಾಕ್ಷಿಯಾಗಿದೆ. ಆಧ್ಯಾತ್ಮಿಕ ವಸ್ತುವೊಂದನ್ನು ತೆಗೆದುಕೊಂಡು ಸಾಮಾಜಿಕ ವಸ್ತುವಿನೊಂದಿಗೆ ಮೇಳೈಸಿ ಭಾಮಿನಿ ಷಟ್ಪದಿಯಂಥ ದೇಸೀ ಛಂದಸ್ಸಿನ ಮಧುರ ಶೈಲಿಯಲ್ಲಿ ವಿರಚಿಸಿದ್ದಾರೆ. ನಡುಗನ್ನಡ ಭಾಷೆಯ ಲಾಲಿತ್ಯ ಮತ್ತು ಜಾನಪದ ಸೊಗಡಿನ ಕಾವ್ಯವಾಗಿರುವುದು ಇದರ ಮತ್ತೊಂದು ವೈಶಿಷ್ಟ್ಯ. ಬಂಡಾಯ ಧ್ವನಿ, ಕಾವ್ಯ ಕೌಶಲ ದೃಷ್ಟಿ, ಸಾರ್ವಕಾಲಿಕ ಮಾನವೀಯ ಮೌಲ್ಯಗಳ ಪ್ರತಿಪಾದನೆಯಿಂದ ಮಹತ್ತೆನಿಸುವ ಉತ್ಕೃಷ್ಟಕಾವ್ಯವೆನಸಿದೆ ರಾಮಧಾನ್ಯ ಚರಿತೆ. ವ್ಯಕ್ತಿಯೋರ್ವನ ಚಾರಿತ್ರ್ಯ ಪ್ರಕಟವಾಗುವುದು ಸದ್ಗುಣಗಳಿಂದಲೇ ಹೊರತು ಜಾತಿಯ ಅಥವಾ ಹುಟ್ಟಿನ ಆಕಸ್ಮಿಕದಿಂದಲ್ಲ ಎನ್ನುವುದನ್ನು ಮನದಟು ಮಾಡುವುದು ಇದರ ನೀತಿಪಾಠವಾಗಿದೆ.

## ಉಪಸಂಹಾರ/ಕೊನೆಯ ಮಾತು

ಕನಕದಾಸರು ಕೂಡ ವ್ಯವಸ್ಥೆಯನ್ನು ಒಪ್ಪಿಕೊಂಡೇ ಕಾವ್ಯ ಹೆಣೆಯುತ್ತಾರೆ ಆದರೂ ಕೃತಿಯಲ್ಲಿ ಜನಸಾಮಾನ್ಯರ ನಡುವಿನ ಸಾಮಾಜಿಕ ಜೀವನವಿವರಗಳನ್ನು ಅಲ್ಲಲ್ಲಿ ದಾಖಲಿಸುತ್ತಾರೆ. ಜಾತಿ ವ್ಯವಸ್ಥೆಯಲ್ಲಿ ಸ್ಥಾನಮಾನದ ಹಂಚಿಕೆಯಲ್ಲಿ ವಂಚಿತರಾದ ತಳಸಮುದಾಯಗಳ ನೋವುಗಳನ್ನು ಹೇಳುವಂಥ ಕೃತಿಯು ರಾಮಧಾನ್ಯ ಚರಿತೆಯಾಗಿದೆ. ಸಸ್ಯ ಸಹಜವಾದ ಆಹಾರಧಾನ್ಯಗಳ ವಿವರ ಕುರಿತ ಚರ್ಚೆಯನ್ನು ಕಟ್ಟಿಕೊಡುವ ಈ ಕೃತಿಯಲ್ಲಿ ಕೆಳಸಮುದಾಯಗಳನ್ನು ಕಡೆಗಣಿಸುವ ರಾಜರ ಮತ್ತು ಕುಲೋತ್ತಮರ ವಿವರಗಳನ್ನು ಕಟ್ಟಿಕೊಡುತ್ತದೆ.

ಒಟ್ಟಾರೆಯಾಗಿ ಭರತ ಖಂಡದ ವರ್ಣ–ವರ್ಗ ವ್ಯವಸ್ಥೆಯ ವಿರುದ್ಧ ಖಡ್ಗ ಝಳಪಿಸುವ, ಮೇಲು–ಕೀಳು ಎಂಬ ಜಾತಿ ವ್ಯವಸ್ಥೆಯ ಪೊಳ್ಳುತನವನ್ನು ಬಯಲು ಮಾಡುವ ಪುರೋಹಿತ ಶಾಹಿಯು ಕೆಳವರ್ಗಗಳ ಜೊತೆ ಕೂಡಿ ಬಾಳಬೇಕೆಂಬ ರಾಮಸಂದೇಶ ಹೊತ್ತ ಅಣಕು ಕಾವ್ಯವೇ ರಾಮಧಾನ್ಯ ಚರಿತೆಯಾಗಿದೆ. ಆಧ್ಯಾತ್ಮಿಕ ಮತ್ತು ಸಾಮಾಜಿಕ ಆಯಾಮಗಳೆರಡನ್ನೂ ಹೊಂದಿರುವುದು ಇದರ ಮತ್ತೊಂದು ವಿಶೇಷತೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಕಾವ್ಯಧರ್ಮ, ಸತ್ವ, ಪ್ರಯೋಗಶೀಲತೆ, ವೈಚಾರಿಕ ಪ್ರಜ್ಞೆಯ ಕೊರತೆಯಿಂದ ನರಳುವವರ ಮೇಲೆ ಕ್ಷ–ಕಿರಣ ಮತ್ತು ಜಾನಪದ ಸೊಗಡಿನಿಂದ ಕಂಗೊಳಿಸಿದೆ ರಾಮಧಾನ್ಯ ಚರಿತೆ.

## ಗ್ರಂಥಋಣ

1. ಕನಕ ಜನಪ್ರಿಯ ಸಂಪುಟ– ಡಾ.ದೇ.ಜವರೇಗೌಡ